ಮೂಲ ದಾವಾ ಸಂಖ್ಯೆ. 82/2015 ಡಿ ಡಬ್ಲ್ಯೂ 1

(ದಿನಾಂಕ 23-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎಂ ಎಸ್ ವಕೀಲರಿಂದಃ-

ನಾನು ಈ ಹಿಂದೆ ನ್ಯಾಯಾಲಯದಲ್ಲಿ ನುಡಿದಿರುವ ಸಾಕ್ಷಿ ನನಗೆ ನೆನಪಿದೆ. ದಾವಾಸ್ತಿ ಮೂಲ ಯಾರದ್ದು ಅಂತಾ ತೋರಿಸಲು ಹಳೇ ಪಹಣಿ ಮತ್ತು ಅನುಭವದ ಅಳತೆ ಮಾಡಿರುವ ದಾಖಲೆಯನ್ನು ಹಾಜರುಪಡಿಸಿದ್ದೇನೆ. ದಾವಾಸ್ತಿಯ ಡಯಾಗ್ಲಾಟ್ ನಾನು ನೋಡಿದ್ದೇನೆ. ನಿಪಿ-14 ಡಯಾಗ್ಲಾಟಿನಲ್ಲಿರುವ ಆಸ್ತಿ ನಮ್ಮ ಅಜ್ಜಿ ಸಕ್ರವ್ವ ಇವರು ಸಂಪೂರ್ಣವಾಗಿ ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. ದಾವಾಸ್ತಿಯನ್ನು ನನ್ನ ಅಜ್ಜಿ ಫುಕಾಸಿ ಭೀಮನಗೌಡ ಇವರಿಗೆ ದಿನಾಂಕಃ22-09-1952 ರಲ್ಲಿ ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಮ್ಮ ಆಸ್ತಿ ನಂ.140 ಸಿ/1 ರ 4 ಎಕರೆ ಇದನ್ನು ನಾವು ಮಾರಾಟ ಮಾಡಿಲ್ಲವೆನ್ನುತ್ತಾರೆ. ನಮ್ಮ ಅಜ್ಜಿ ಸಕ್ರವ್ವ ಇವರ ಹೆಸರಿನಲ್ಲಿ ಸದರಿ ಅಸ್ತಿ ಸರ್ವೆ ನಂ.140 ಸಿ/1 ರ 4 ಎಕರೆ ಜಮೀನು ದಾಖಲಿದ್ದ ಬಗ್ಗೆ ದಾಖಲೆ ನೀಡಿಲ್ಲ ತಂದೆ ಹಸೆರಿನಲ್ಲಿ ದಾಖಲಿದ್ದ ಬಗ್ಗೆ ದಾಖಲೆ ನೀಡಿದ್ದೇನೆ. ಸಕ್ರವ್ವ ಇವರಿಗೆ ನನ್ನ ತಂದೆ ಮತ್ತು ನಮ್ಮ ದೊಡ್ಡಪ್ಪ ದುರುಗಪ್ಪ ಇವರು ಮಾತ್ರ ಮಕ್ಕಳು ಇವರಿಗೆ ಹೆಣ್ಣುಮಕ್ಕಳು ಇರುವುದಿಲ್ಲ. ಮೇಲೆ ಹೇಳಿದಂತೆ ವಂಶವೃಕ್ಷವನ್ನು ನಾನು ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದು ಹಾಜರುಪಡಿಸಿಲ್ಲ. ಆ ರೀತಿ ವಂಶವೃಕ್ಷವನ್ನು ಪಡೆದು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನನ್ನ ಅಜ್ಜಿ ಸಕ್ರವ್ವ ಯಾವಾಗ ಮರಣ ಹೊಂದಿದ್ದರೆಂದು ನನಗೆ ಗೊತ್ತಿಲ್ಲ. ಸದರಿ 4 ಎಕರೆ ಜಮೀನು ಮೂಲತಃ ಯಾರದು ಎಂದರೆ ಅದು ಡಯಾಗ್ಲಾಟ್ ಪ್ರಕಾರ ನಮ್ಮ ಅಮ್ಮ ಸಕ್ರಮ್ಮ ಇವರದ್ದು, ನಂತರದಲ್ಲಿ ಅದು ನನ್ನ ತಂದೆ ಬೈಲಪ್ಪ ಇವರ ಹೆಸರಿಗೆ ಬಂತು ಅದು ನಮ್ಮ ತಂದೆಯ ಹೆಸರಿನಲ್ಲಿದೆ. ನಾನು ಹೇಳುವ ಹಾಗೆ ಜಮೀನು ನಮ್ಮ ಅಜ್ಜಿ ಸಕ್ರಮ್ಮ ಇವರ ಹೆಸರಿನಲ್ಲಿ ನಮೂದಿಲ್ಲವೆಂದರೆ ಸಾಕ್ಷಿಯು 6 ಎಕರೆ, 14 ಎಕರೆ ಜಮೀನು ನಮೂದು ಇದೆ ಎನ್ನುತ್ತಾರೆ. ಸದರಿ 6 ಎಕರೆ ಜಮೀನು ಡಯಾಗ್ಲಾಟ್ ಪ್ರಕಾರ ಸರ್ವೆ ನಂ.140 ಸಿ/5 ಸಿ ಇರುತ್ತದೆಂದರೆ ಸರಿಯಲ್ಲ. 14 ಎಕರೆ ಚಿಲ್ಲರೆ ಜಮೀನು ಡಯಾಗ್ಲಾಟ್ ಪ್ರಕಾರ ಸರ್ವೆ ನಂ.140 ಸಿ/2, 14 ಎಕರೆ 51 ಸೆಂಟ್ಸ ಎಂದರೆ ನನಗೆ ಗೊತ್ತಾಗುವುದಿಲ್ಲ. ಸದರಿ 4 ಎಕರೆ ಜಮೀನು ಡಯಾಗ್ಲಾಟ್ ಪ್ರಕಾರ ನನಗಾಗಲೀ, ನನ್ನ ಅಜ್ಜಿಗಾಗಲೀ ಅಥವಾ ನನ್ನ ತಂದೆಗಾಗಲೀ ಯಾವುದೇ ರೀತಿಯಿಂದ ಸಂಬಂಧಪಟ್ಟಿಲ್ಲವೆಂದರೆ ಸರಿಯಲ್ಲ. ವಾದಿಯರ ದೊಡ್ಡಪ್ಪ ಖರೀದಿಸಿದ ದಾವಾಸ್ತಿಗೂ ನಮಗೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ.

ನಮಗೆ ದಾವಾಸ್ತಿಯ ಮೇಲೆ ಯಾವುದೇ ಹಕ್ಕು ಅಧಿಕಾರ ಇಲ್ಲದೇ ಇದ್ದರೂ ಸಹಾ ವಾದಿಯ ಸ್ವಾಧೀನಕ್ಕೆ ತೊಂದರೆ ಕೊಟ್ಟಿದ್ದಕ್ಕೆ ಈ ದಾವೆಯನ್ನು ದಾಖಲಿಸಿದ್ದಾರೆಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ವಾದಿಯು ಸ್ವಾಧೀನದಲ್ಲಿರುತ್ತಾರಂತಾ ನಿಪಿ-16 ಮತ್ತು 18 ರಂತೆ ಗ್ರಾಮ ಲೆಕ್ಕಾಧಿಕಾರಿಗಳು ಪ್ರಮಾಣಪತ್ರವನ್ನು ನೀಡಿರುತ್ತಾರೆಂದರೆ ಸರಿಯಲ್ಲ. ನಿಪಿ-17 ರಂತೆ ದಾವಾಸ್ತಿಯ ಮೇಲೆ ವಾದಿಯರಿಗೆ ಪಿ ಕೆ ಜಿ ಬಿ ಬ್ಯಾಂಕಿನವರು ಸಾಲವನ್ನು ಕೊಟ್ಟಿದ್ದಾರೆಂದರೆ ಸರಿ ಸಾಕ್ಷಿ ಮುಂದುವರೆದು ಜಮೀನು ಸ್ವಾಧೀನದಲ್ಲಿ ನಾವಿದ್ದೇವೆ ಅಂತಾ ನುಡಿಯುತ್ತಾರೆ. ಆ ರೀತಿ ಸಾಲವನ್ನು ಕೊಡಬೇಕಾದರೆ ಬ್ಯಾಂಕಿನವರು ದಾಖಲೆಗಳನ್ನು ಪರಿಶೀಲಿಸಿ ಸ್ವಾಧೀನವನ್ನು ಖಾತರಿಪಡಿಸಿಕೊಂಡು ಕಾನೂನು ಸಲಹೆ ಪಡೆದುಕೊಂಡು ಸಾಲವನ್ನು ನೀಡುತ್ತಾರೆಂದರೆ ಸರಿ. ನಿಪಿ-20 ರಂತೆ ವಾದಿಯರು ದಾವಾಸ್ತಿಯಲ್ಲಿ ಬೆಳೆದ ಶೇಂಗಾ ಬೆಳೆಯನ್ನು ಎ ಪಿ ಎಂ ಸಿ ಯವರಿಗೆ ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. ಹೆಚ್ ಬಿ ಹಳ್ಳಿಯ ಕೃಷಿ ಪತ್ತಿನ ಸಂಘದಲ್ಲಿ ನಿಪಿ-21 ರಂತೆ ವಾದಿಯರು ದಾವಾಸ್ತಿಯ ಮೇಲೆ ಸಾಲ ಪಡೆದಿದ್ದಾರೆಂದರೆ ಸರಿ ಸಾಕ್ಷಿ ಮುಂದುವರೆದು ಅದು ನಮ್ಮ ತಂದೆಯ ಹೆಸರಿನಲ್ಲಿ ಆಸ್ತಿ ಇತ್ತು ನಂತರದಲ್ಲಿ ವಾದಿಯರು ತಮ್ಮ ಹೆಸರಿಗೆ ಮಾಡಿಕೊಂಡು ಸಾಲ ಪಡೆದಿದ್ದಾರೆನ್ನುತ್ತಾರೆ. ನಿಪಿ-22 ಬೆಳೆ ದೃಢೀಕರಣ ಪತ್ರ ಕೊಡುವ ಸಮಯದಲ್ಲಿ ಸಂಬಂಧಿದ ಕಂದಾಯಾಧಿಕಾರಿಗಳು ಸ್ಥಳಕ್ಕೆ ಬಂದು ಪರಿಶೀಲಿಸಿ ಬೆಳೆ ದೃಢೀಕರಣ ಪತ್ರ ನೀಡಿರುತ್ತಾರೆಂದರೆ ಸರಿಯಲ್ಲ.

ದಾವಾಸ್ತಿಯಲ್ಲಿ 66 ಕೆ ವಿ ವಿದ್ಯುತ್ ಕಂಬ ಹೋಗಿದೆ ಎಂದರೆ ಸರಿ. ಅದಕ್ಕೆ ಸಂಬಂಧಿಸಿದಂತೆ ವಾದಿಯರಿಗೆ ರೂ.32 ಸಾವಿರ ಪರಿಹಾರ ಸಹಾ ಮಂಜೂರಾಗಿದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಸದರಿ ಪರಿಹಾರವನ್ನು ನಾನೇ ಪಡೆದಿದ್ದೇನೆನ್ನುತ್ತಾರೆ. ಆ ಬಗ್ಗೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ನನ್ನ ತಂದೆ ಬೈಲಪ್ಪನವರು ಸನ್ 1979 ರಲ್ಲಿ ಮೃತಪಟ್ಟಿದ್ದಾರೆ. ವಾದಿಯ ಹೆಸರಿಗೆ ಮ್ಯುಟೇಶನ್ ಆದಾಗ ನೀವು ತಕರಾರು ಏನಾದರೂ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಆಸ್ತಿಯು ನಮ್ಮ ತಂದೆಯ ಹೆಸರಿನಲ್ಲಿ ಇದ್ದಿದ್ದರಿಂದ ತಕರಾರು ಕೊಟ್ಟಿಲ್ಲವೆನ್ನುತ್ತಾರೆ. ವಾದಿಯ ಹೆಸರಿನಲ್ಲಿ ದಾವಾಸ್ತಿ ಮ್ಯುಟೇಶನ್ ಆದ ವಿಚಾರ ನನಗೆ ಸನ್ 2006 ರಲ್ಲಿ ತಿಳಿಯಿತು. ಸನ್ 2006 ರಲ್ಲಿ ವಾದಿಯ ಹೆಸರಿಗೆ ಮ್ಯುಟೇಶನ್ ಆದ ಮೇಲೆ ಆ ಮ್ಯುಟೇಶನ್ ಪ್ರಶ್ನಿಸಿ ನಾನು ಕಂದಾಯ ನ್ಯಾಯಾಲಯದಲ್ಲಿ ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಮತ್ತು ನ್ಯಾಯಾಲಯದಲ್ಲಿ ಯಾವುದೇ ದಾವೆ ದಾಖಲಿಸಿಲ್ಲ. 2006 ರಲ್ಲಿ ನನಗೆ ವಿಚಾರ ತಿಳಿಯಿತೆನ್ನುವ ಬಗ್ಗೆ ನಾನು ಪ್ರತಿವಾದ ಪತ್ರದಲ್ಲಿ

ಬರೆಸಿಲ್ಲ. ದಾವಾ ಜಮೀನು ನಮ್ಮದಿರುವುದಿಲ್ಲ ಆದ್ದರಿಂದ ಸನ್ 2006 ರಲ್ಲಿ ಈ ವಿಚಾರ ಗೊತ್ತಾದರೂ ಸಹಾ ನಾನು ಯಾವುದೇ ಕ್ರಮ ತೆಗೆದುಕೊಂಡಿಲ್ಲವೆಂದರೆ ಸರಿಯಲ್ಲ.

ನಿಡಿ-38 ದಾಖಲೆಯನ್ನು ನ್ಯಾಯಾಲಯದ ಆದೇಶದಂತೆ ದಿಃ 19-12-2024 ರಂದು ನೊಂದಣಿಯಾದ ದಾಖಲೆಯಾಗಿರುತ್ತದೆಂದರೆ ಸರಿ. ನ್ಯಾಯಾಲಯದಲ್ಲಿ ಸುಳ್ಳು ಮಾಹಿತಿ ನೀಡಿ ಈ ದಾವೆಗೆ ಅನುಕೂಲವಾಗುವ ರೀತಿಯಲ್ಲಿ ಸದರಿ ದಾಖಲೆಯನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ಸದರಿ ದಾಖಲೆಯಂತೆ ದಿಃ24-08-1979 ರಂದು ನಮ್ಮ ತಂದೆ ಮರಣ ಹೊಂದಿದ್ದಾರಂತಾ ಸುಳ್ಳು ಮಾಹಿತಿ ನೀಡಿ ದಾಖಲೆ ಪಡೆದಿದ್ದೇನೆಂದರೆ ಸರಿಯಲ್ಲ.

ದಾವಾಸ್ತಿಗೆ ಸಂಬಂಧಿಸಿದಂತೆ ನಿಮ್ಮ ತಂದೆಯವರು ತೆರಿಗೆ ಕಟ್ಟಿದ್ದಾರೆನ್ನುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಆ ಸಮಯದಲ್ಲಿ ತೆರಿಗೆ ಕಟ್ಟುತ್ತಿರಲಿಲ್ಲ ಆ ಸಮಯದಲ್ಲಿ ಅಧಿಕಾರಿಗಳು ಬುಕ್ ನಲ್ಲಿ ಬರೆಯುತ್ತಿದ್ದರು ಎನ್ನುತ್ತಾರೆ. ಆ ಬುಕ್ಕನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ದಿಃ23-02-1955 ರ ಖರೀದಿ ಪತ್ರದಲ್ಲಿ ಏನು ಚಕ್ಕುಬಂದಿ ನಮೂದು ಇದೆ ಅಂತಾ ನಾನು ತಿಳಿದುಕೊಂಡಿದ್ದೇನೆ. ಸದರಿ ದಾಖಲೆಯಲ್ಲಿ ಚಕ್ಕುಬಂದಿ ಪೂಃ ಶೆಟ್ಟು ತಿಮ್ಮಣ್ಣ, ಪಃ ಕುರುಬರ ಬೈಲಪ್ಪ, ಉಃ ಅಗಸರ ಗಿಡ್ಡಪ್ಪ ಹಾಗೂ ದಃಪಾಶುಮಾಲ್ ಶೇಕ್ ಅಂತಾ ನಮೂದು ಇದೆ.

ದಾವಾಸ್ತಿಯ ಚಕ್ಕುಬಂದಿ ಈಗ ಪೂಃ ಸಿ ಹೆಚ್ ಅನಿಲ್ ಕುಮಾರ್ ಮತ್ತು ಎಸ್ ಚಂದ್ರಶೇಖರ್ ಇವರ ಜಮೀನಿದೆ ಎಂದರೆ ಸರಿ. ಅವರು ಮೂನ್ ಮಲ್ ಶೇಠ್ ಇವರಿಂದ ಸದರಿ ಜಮೀನ್ನು ಖರೀದಿಸಿದ್ದಾರೆನ್ನುತ್ತಾರೆ, ಪಃ ಕೋಟೆಹಾಳ್ ಫಕೀರಮ್ಮ ಇವರ ಜಮೀನು ಇತ್ತು ಈಗ ಹುಲಿಗೆಮ್ಮ ಇವರ ಹೆಸರಿನಲ್ಲಿದೆ, ಉಃ ಗಿಡ್ಡಜ್ಜ ಮತ್ತು ಮಡಿವಾಳರ ಈರಣ್ಣ ಇವರ ಜಮೀನು ಇದೆ ಹಾಗೂ ದಃ ಸಿ ಹೆಚ್ ಅನಿಲ್ ಕುಮಾರ್ ಮತ್ತು ಎಸ್ ಚಂದ್ರಶೇಖರ್ ಇವರ ಜಮೀನಿದೆ. ದಾವಾಸ್ತಿಗೆ ಹತ್ತಿಕೊಂಡು ಡಿಡಬ್ಲ್ಯೂಃ3 ಇವರ ಜಮೀನು ಇರುವುದಿಲ್ಲ ಒಂದು ಜಮೀನು ಬಿಟ್ಟು ಇದೆ. ದಾವಾಸ್ತಿಯ ಪಶ್ಚಿಮ ದಿಕ್ಕಿಗೆ ಇರುವ ಕೋಟೆಹಾಳ್ ಫಕೀರಮ್ಮ ಇವರ ಜಮೀನು ಮೊದಲು ಶೆಟ್ಟು ತಿಮ್ಮಣ್ಣ ಇವರಿಗೆ ಸೇರಿತ್ತು ಇದನ್ನು ಫಕೀರಮ್ಮ ಇವರು ಖರೀದಿ ಮಾಡಿದ್ದಾರೆನ್ನುತ್ತಾರೆ. ದಾವಾಸ್ತಿಯ ಉತ್ತರ ದಿಕ್ಕಿನಲ್ಲಿರುವ ಮಡಿವಾಳರ ಈರಣ್ಣ ಇವರ ಜಮೀನು ಅದು ಗಿಡ್ಡಪ್ಪ ಇವರು ಸ್ವಂತ ಜಮೀನು ಇರುತ್ತದೆ. ದಾವಾಸ್ತಿಯ ದಕ್ಷಿಣ ದಿಕ್ಕಿಗೆ ಇರುವ ಸಿ ಹೆಚ್ ಅನಿಲ್ ಕುಮಾರ್ ಮತ್ತು ಎಸ್ ಚಂದ್ರಶೇಖರ್ ಇವರ ಜಮೀನು ಮೊದಲು ನಮ್ಮದೇ ಆಗಿತ್ತು. ಅದು ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ್ ಆಸ್ತಿಯಲ್ಲಿ ನಮೂದಿರುವಂತಹ ಚಕ್ಕುಬಂದಿ ನಿಪಿ-1 ರ ಆಸ್ತಿಯ ಶೆಡ್ಯೂಲಿನಲ್ಲಿರುವ ಮೂಲ ಮಾಲೀಕರ ವಂಶಸ್ಥರು ಆಗಿರುತ್ತಾರೆಂದರೆ ಸರಿ. ಆ ಕಾರಣದಿಂದಾಗಿ ವಾದಪತ್ರದಲ್ಲಿರುವ ದಾವಾಸ್ತಿಯ ಚಕ್ಕುಬಂದಿ ಮತ್ತು

ನಿಪಿ-1 ಖರೀದಿಪತ್ರದಲ್ಲಿರುವ ಚಕ್ಕುಬಂದಿ ವ್ಯತ್ಯಾಸ ಇದೆ ವಾದಿಯು ದಾವಾಸ್ತಿಯ ಸ್ವಾಧೀನದಲ್ಲಿರುವುದಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಾವಾಸ್ತಿಯನ್ನು ವಾದಿಯ ದೊಡ್ಡಪ್ಪ ಇವರು ಅದರ ಮಾಲೀಕರಿಂದ ಕಾನೂನುಬದ್ಧವಾಗಿ ದಿಃ 22-03-1955 ರಂದು ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ. 5 ಎಕರೆ 46 ಸೆಂಟ್ಸ ಜಮೀನನ್ನು ಸರ್ವೆ ನಂ.140 ಸಿ ರಲ್ಲಿ ನನ್ನ ತಂದೆ ಮತ್ತು ಗಂಗವ್ವ ಇವರು ಪೋಲೀಸ್ ಪಾಟೀಲ್ ಯಾನೇ ಪೋಕಾಸಿ ಭೀಮನಗೌಡ ಇವರಿಗೆ ದಿ.22-09-1952 ರಂದು ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಪೋಲೀಸ್ ಪಾಟೀಲ್ ಇವರು ದಾವಾಸ್ತಿಯನ್ನು ದಿಃ22-03-1955 ರಂದು ವಾದಿಯ ದೊಡ್ಡಪ್ಪನಿಗೆ ಮಾರಾಟ ಮಾಡಿದ್ದಾರೆ ಉಳಿದ 1.46 ಎಕರೆ ಜಮೀನನ್ನು ಅದೇ ದಿನದಂದು ಜೋಗದ ಹನುಮಂತಪ್ಪ ಇವರಿಗೆ ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. ಈ ವಿಚಾರ ನಿಪಿ-15 ರ ಇ ಸಿ ಯಲ್ಲಿ ಸಹಾ ನಮೂದಾಗಿದೆ ಎಂದರೆ ಸರಿಯಲ್ಲ. ಸದರಿ ವಿಚಾರವು ನನಗೆ ಗೊತ್ತಿದ್ದರೂ ಸಹಾ ಅದನ್ನು ಮರೆಮಾಚಿ ನಮ್ಮ ತಂದೆ ಜಮೀನು ಮಾರಾಟ ಮಾಡಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಾವಾಸ್ತಿಯ ಸ್ವಾಧೀನತೆಯ ನಕ್ಷೆಯನ್ನು ಬೇಡಿ ಸಂಬಂಧಿಸಿದ ಇಲಾಖೆಗೆ ಅರ್ಜಿ ನೀಡಿದ್ದೇನೆ. ಅದರ ಸ್ವೀಕೃತಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆ ರೀತಿ ನಾನು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ.

ಸಾಮಾನ್ಯವಾಗಿ ಸರ್ವೆ ಕಾರ್ಯ ಮಾಡುವ ಸಮಯದಲ್ಲಿ ಜಮೀನು ಪಹಣಿಯಲ್ಲಿ ಯಾರ ಹೆಸರು ಇರುತ್ತದೆಯೋ ಅವರಿಗೆ ನೋಟೀಸನ್ನು ಕೊಡುತ್ತಾರೆಂದರೆ ಸಾಕ್ಷಿಯು ನೇರವಾಗಿ ಉತ್ತರ ನೀಡದೇ ಅನುಭವದಲ್ಲಿ ಯಾರಿದ್ದಾರೆ ಆ ಬಗ್ಗೆ ನಾನು ನಕ್ಷೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಸನ್ 2019 ರಲ್ಲಿ ಈ ದಾವೆ ಚಾಲ್ತಿಯಲ್ಲಿದ್ದ ಸಮಯದಲ್ಲಿ ತಹಶೀಲ್ದಾರ್ ರವರಿಗೆ ಅರ್ಜಿಕೊಟ್ಟಾಗ ದಾವಾಸ್ತಿ ವಾದಿಯ ಹೆಸರಿನಲ್ಲಿ ದಾಖಲಿತ್ತು ಎಂದರೆ ಸರಿ. ಸರ್ವೆ ಸಮಯದಲ್ಲಿ ಸರ್ವೆ ಇಲಾಖೆಯವರು ವಾದಿಗೆ ನೋಟೀಸನ್ನು ನೀಡಿಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ